C.R.P.67

Form No.4 (Civil)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No. 121/2021 ಸಿ. ಡಬ್ಲ್ಯೂ- 25 ಪಿ. ಡಬ್ಲ್ಯೂ-19

ದಿನಾಂಕಃ- 20.07.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ

| | |
|---|---|
| ಸಾಕ್ಷಿದಾರರ ಹೆಸರು | ಕಾಳೇಗೌಡ |
| ತಂದೆಯ ಹೆಸರು | ಚಿಕ್ಕಬೋರೆಗೌಡ |
| ವಯಸ್ಸು | 62 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಕುದರಗುಂಡಿ ಗ್ರಾಮ |

ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

1. ನನ್ನ ಮನೆಯಿಂದ ನಮ್ಮ ಜಮೀನಿಗೆ ಹೋಗುವುದಕ್ಕಾಗಿ ನಾನು ಒಂದು ಸ್ಕೂಟರನ್ನು ಹೊಂದಿದ್ದೆನು. ಸದರಿ ನನ್ನ ಸ್ಕೂಟರ್ ನನ್ನ ಹೆಸರಿನಲ್ಲಿಯೇ ಇದೆ, ಆದರೆ ಅದರ ಸಂಖ್ಯೆ ಹೇಳಲು ನೆನಪಿಲ್ಲ. ಕುದರಗುಂಡಿ ಗ್ರಾಮದಲ್ಲಿ ನನಗೆ ಜಮೀನು ಇದೆ.

2. ಸುಮಾರು 3 ವರುಷಗಳ ಹಿಂದೆ ಒಂದು ದಿನ ಸಂಜೆ 4.00 ಗಂಟೆ ಸಮಯದಲ್ಲಿ ನಾನು ನನ್ನ ದ್ವಿಚಕ್ರ ವಾಹನದಲ್ಲಿ ನಮ್ಮ ಮನೆಯಿಂದ ನಮ್ಮ ಜಮೀನಿನ ಬಳಿಗೆ ಹೋಗುತ್ತಾ ಇದ್ದೆನು. ನಾನು ಆ ರೀತಿ ನನ್ನ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಗೆಜ್ಜಲಗೆರೆ ಗ್ರಾಮದ ಸ್ವರೂಪ ಎನ್ನುವವನು ನನ್ನನ್ನು ಉದ್ದೇಶಿಸಿ " ಕಾರು ಪಂಚರಾಗಿದೆ " ಎಂದು ಹೇಳಿ ನನ್ನ ಸ್ಕೂಟರನ್ನು ಪಡೆದುಕೊಂಡು ಹೋದನು. ಸದರಿ ಸ್ವರೂಪನನ್ನು ನೋಡಿದರೆ ಗುರುತಿಸುತ್ತೇನೆ.

3. **ಸೂಚನೆಃ-** ಈಗ ಈ ಸಾಕ್ಷಿದಾರರು ನ್ಯಾಯಾಲಯದ ಮುಂದೆ ನಿಂತಿರುವ 6 ನೇ ಆರೋಪಿಯನ್ನು ತೋರಿಸಿ ಈತನೇ ಸ್ವರೂಪ ಎಂಬ ವ್ಯಕ್ತಿ ಎಂದು ನುಡಿದಿದ್ದಾರೆ. ನಂತರ ನ್ಯಾಯಾಲಯವು 6 ನೇ ಆರೋಪಿಯನ್ನು ವಿಚಾರಿಸಲಾಗಿ ಆತನು ತನ್ನ ಹೆಸರು ಸ್ವರೂಪ ಎಂದು ಒಪ್ಪಿಕೊಂಡಿದ್ದಾನೆ.

4. ನಾನು ಸದರಿ ಸ್ವರೂಪನಿಗೆ ನನ್ನ ಸ್ಕೂಟರನ್ನು ಕೊಡುವ ಸಮಯದಲ್ಲಿ ಆ ಸ್ಥಳದಲ್ಲಿ ಒಂದು ಕಾರು ಪಂಚರಾಗಿ ನಿಂತಿತ್ತು. ನನ್ನ ಕಣ್ಣು ಸ್ವಲ್ಪ ಮಂಜು ಆಗಿರುವ ಕಾರಣದಿಂದ ಆ ಕಾರಿನ ಬಣ್ಣವನ್ನು ಗಮನಿಸಲು

ನನಗೆ ಸಾಧ್ಯವಾಗಲಿಲ್ಲ. 6 ನೇ ಆರೋಪಿ ಸ್ವರೂಪನು ನನ್ನಿಂದ ದ್ವಿಚಕ್ರ ವಾಹನವನ್ನು ಪಡೆದುಕೊಂಡ ಸಮಯದಲ್ಲಿ ಆತನ ಜೊತೆ ಬೇರೆ ಯಾರೂ ಇರಲಿಲ್ಲ.

5. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ಆದರೆ ಅಂಚೆ ಮೂಲಕ ಪೊಲೀಸರು ನನಗೆ ಒಂದು ನೊಟೀಸು ಕಳುಹಿಸಿದ್ದರು ಮತ್ತು " ನಿಮ್ಮ ಬಳಿ ಇರುವ ದಾಖಲಾತಿಗಳನ್ನು ತೋರಿಸಿ ನಿಮ್ಮ ವಾಹನವನ್ನು ತೆಗೆದುಕೊಂಡು ಹೋಗಿರಿ " ಎಂದು ನನಗೆ ಮಾಹಿತಿಯನ್ನು ಕೊಟ್ಟಿದ್ದರು. ನನ್ನ ವಾಹನವು ಪೊಲೀಸ್ ಠಾಣೆಯಲ್ಲಿ ಇತ್ತು. ನಾನು ಇದುವರೆಗೂ ಸಹಾ ನನ್ನ ದ್ವಿಚಕ್ರ ವಾಹನವನ್ನು ನ್ಯಾಯಾಲಯದಿಂದ ಅಥವಾ ಪೊಲೀಸರಿಂದ ಬಿಡುಗಡೆ ಮಾಡಿಸಿಕೊಂಡಿರುವುದಿಲ್ಲ.

<u>ಪಾಟೀ ಸವಾಲುಃ– ಆರೋಪಿಗಳ ಪರವಾಗಿ ಶ್ರೀ. ಸಿ .ಪಿ. ವಕೀಲರಿಂದಃ–</u>

ಮಾನ್ಯ ವಕೀಲರು ಹಾಜರಿದ್ದಾರೆ ಮತ್ತು ಏನೂ ಇಲ್ಲ ಎಂದು ನುಡಿದಿದ್ದಾರೆ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

ಸಹಿ/–
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.